ಒಂದಾಣೆ ಮಾಲೆ 198

ಭಾರತೀಯ ಕಣ್ಮಣಿಗಳು

(ಭಾಗ ೧)

*

ಲೇಖಕರು:
ಶ್ರೀ| ಪಿ. ರಾಮಣ್ಣ ಚಡಗ, ಪಾಂಡೇಶ್ವರ.

*

ರಾಜಾರಾಮ ಮೋಹನರೋಯ್, ಝಾನ್ಸಿ ಲಕ್ಷ್ಮಿಬಾಯಿ, ದಾದಾಭಾಯಿ ನೌರೋಜಿ, ರಾಮಕೃಷ್ಣ ಪರಮಹಂಸ, ರಾನಡೆ, ಫಿರೋಜ್‌ಷಾ ಮೆಹತಾ, ಲೋಕಮಾನ್ಯ ತಿಲಕ, ಜಗದೀಶಚಂದ್ರ ಬೋಸ್, ಕವೀಂದ್ರ ರವೀಂದ್ರ, ಮೋತಿಲಾಲ ನೆಹರು, ಸ್ವಾಮಿ ವಿವೇಕಾನಂದ ಮತ್ತು ಮಹಾತ್ಮಾ ಗಾಂಧಿ ಇವರ ಸಂಕ್ಷಿಪ್ತ ಜೀವನ ಚರಿತ್ರ.

1958

ಬೆಲೆ: ಒಂದಾಣೆ.

ಒಂದಾಣೆ ಮಾಲೆ, ಮಂಗಳೂರು.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1958ನೇ ಆಗೋಸ್ತು ತಿಂಗಳ ಮೊದಲನೆಯ ವಾರದ ವರೆಗೆ 198 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕ ಹೊರಡುತ್ತಲೇ ಇದೆ.

198 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 4028 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

ಓದುಗರಲ್ಲಿ ಎರಡು ನಿಮಿಷ

ಕಳೆದ ವರ್ಷ (1957) ನಾವು ಸ್ವಾತಂತ್ರ್ಯ ಸಮರದ ಶತವರ್ಷೋತ್ಸವವನ್ನು ಆಚರಿಸಿದೆವು. ನಮ್ಮ ಭಾರತದಲ್ಲಿ, ಪರದಾಸ್ಯ ಶೃಂಖಲೆಯಿಂದ ನೊಂದ ಭಾರತವನ್ನು ಎಚ್ಚರಿಸಿ, ಅದರಲ್ಲಿ ರಾಷ್ಟ್ರೀಯ ಭಾವನೆಯನ್ನು ಹುಟ್ಟಿಸಿ, ದೇಶಪ್ರೇಮವನ್ನು ಬಲಿಸಲು ಹಲವರು ರಕ್ತಾರ್ಪಣೆ ಮಾಡಿರುವರು; ಕಾರಾಗ್ರಹವಾಸ ಅನುಭವಿಸಿರುವರು. ತನುಮನಧನಗಳನ್ನರ್ಪಿಸಿರುವರು. ಉಗ್ರ ಶಿಕ್ಷೆ ಅನುಭವಿಸಿರುವರು. ಸನಾತನ ಧರ್ಮದ ತವರ್ಮನೆಯಾದ ಭಾರತದಲ್ಲಿ ಧರ್ಮೋದ್ಧಾರಕರಾಗಿಯೂ, ಸಮಾಜ ಸುಧಾರಕರಾಗಿಯೂ, ಭಾರತಾಂಬೆಗೆ ಸೇವೆ ಸಲಿಸಿದವರು ಹಲವರಿರುವರು.

ಇಂಥ ಭಾರತೀಯ ಕಣ್ಮಣಿಗಳ ಜೀವನ ಚರಿತ್ರೆಯನ್ನು ಪ್ರತಿಯೊಬ್ಬ ಭಾರತೀಯನೂ ತಿಳಿಯಬೇಕು. ಈ ಚಿಕ್ಕ ಹೊತ್ತಿಗೆಯಲ್ಲಿ ಅವರೆಲ್ಲರನ್ನು ಸ್ಮರಿಸಲು ಸಾಧ್ಯವಿಲ್ಲದಷ್ಟು ಸಂಖ್ಯೆಯಲ್ಲಿ ಆ ಪುಣ್ಯಪುರುಷರಿರುವರು. ಇಲ್ಲಿ, ಕೆಲವರ ಜೀವನಚರಿತ್ರವನ್ನು ಮಾತ್ರ, ಸಂಕ್ಷೇಪವಾಗಿ ಕೊಟ್ಟಿರುವೆವು, ಈ ಕಿರು ಹೊತ್ತಗೆಯಿಂದ ವಿದ್ಯಾರ್ಥಿಗಳೂ ಏನಾದರೂ ಪ್ರಯೋಜನವನ್ನು ಹೊಂದಿದರೆ, ಪ್ರತಿಯೊಬ್ಬ ಪ್ರಜೆಯಲ್ಲಿ ದೇಶಪ್ರೇಮದ ಅಂಕುರವೊಂದು ಇದರಿಂದ ಕುಡಿವಡೆದರೆ ಈ ಹೊತ್ತಗೆಯು ಫಲಕಾರಿಯಾದಂತೆ.

ಇತಿ,

ರಾಷ್ಟ್ರಾಭಿಮಾನಿ,

ಪಿ. ರಾಮಣ್ಣ ಚಡಗ.

ಪಾಂಡೇಶ್ವರ,
1958.

ಭಾರತೀಯ ಕಣ್ಮಣಿಗಳು

1. ಸಮಾಜ ಸುಧಾರಕ ರಾಜಾರಾಮ ಮೋಹನ ರಾಯ್

(1774—1833)

ತ್ರಿಕರಣಪೂರ್ವಕವಾಗಿ, ಆಮರಣಪರ್ಯಂತ, ಧೀರಹೃದಯ ಮತ್ತು ನಿಶ್ಚಲ ಏಕಾಗ್ರತೆಗಳಿಂದ ಸಮಾಜಸುಧಾರಕರಾಗಿ ಸೇವೆಸಲ್ಲಿಸಿದ ಭಾರತೀಯ ಕಣ್ಮಣಿಗಳಲ್ಲಿ ಮೋಹನರಾಯರು ಮೊದಲಿಗರು. ಇವರು ಬಂಗಾಳದ ಹೂಗ್ಲಿ ಜಿಲ್ಲೆಯ ರಾಧಾನಗರದಲ್ಲಿ ಅವಿಭಕ್ತ ಬ್ರಾಹ್ಮಣ ಸಮಾಜದಲ್ಲಿ ರಮಾಕಾಂತರಿಗೆ ಪುತ್ರರಾಗಿ 1774ರಲ್ಲಿ ಜನಿಸಿದರು. ಹುಟ್ಟೂರಲ್ಲಿ ಬಂಗಾಳಿಯನ್ನೂ ಅನಂತರ ಪಾಟ್ಣಾದಲ್ಲಿ ಅರೇಬಿ ಹಾಗೂ ಪಾರ್ಶಿ ಭಾಷೆಗಳನ್ನೂ ಕಲಿತು ಹಿಂದೂ–ಮುಸಲ್ಮಾನ ಗ್ರಂಥವಿಮರ್ಶಕರಾಗಿ ಕ್ರಮೇಣ ಹಿಂದೂಧರ್ಮದ ಅಂಧಾಚಾರಗಳನ್ನು ಖಂಡಿಸಿ, ಪರಿಣಾಮವಾಗಿ ಮನೆಯನ್ನು ತೊರೆಯಬೇಕಾಯಿತು. ಅಲ್ಲಿಂದ ಟಿಬೇಟಿಗೆ ಹೋಗಿ ಬೌದ್ಧ ಧರ್ಮದ ತತ್ವಗಳನ್ನು ಕಲಿತರಲ್ಲದೆ, ಬಂಗಾಳಕ್ಕೆ ಹಿಂತಿರುಗಿ ಇಂಗ್ಲಿಷ್, ಹಿಬ್ರೂ ಭಾಷಾಜ್ಞಾನವನ್ನು ಗಳಿಸಿ, ಸಮಾಜ ಸುಧಾರಣೆಯಲ್ಲಿ ತೊಡಗಿದರು. ಸಮಾಜದಿಂದ ಬಹಿಷ್ಕರಿಸಲ್ಪಟ್ಟು, ಈಸ್ಟ್ ಇಂಡಿಯಾ ಕಂಪೆನಿಯಲ್ಲಿ 1799ರಲ್ಲಿ ಹುದ್ದೆಯನ್ನು ಪಡೆದರು. ಕಾರಕೂನರಾಗಿ ದುಡಿದು ದಿವಾನರಾಗಿ ಮೆರೆದರು. 1828ರಲ್ಲಿ "ಒಂದೇ ದೇವರು, ಜಾತಿಭೇದವಿಲ್ಲ" ವೆಂಬ ಧ್ಯೇಯಗಳಿಂದ ಕೂಡಿದ ಬ್ರಹ್ಮಸಮಾಜವನ್ನು ಸ್ಥಾಪಿಸಿ, ಅಂತರ್ಜಾತೀಯ ವಿವಾಹಕ್ಕೆ ಅಸ್ತಿವಾರ ಹಾಕಿದರು. ಆಗಿನ ಬಂಗಾಳ ಗವರ್ನರರಾದ (ಆ ವೇಲೆ 1833ರಲ್ಲಿ ಭಾರತದ ಪ್ರಥಮ ಗವರ್ನರ ಜನರಲರಾಗಿ ನೇಮಕಹೊಂದಿದ) ಲೊರ್ಡ್ ಬೆಂಟಿಂಕರೊಂದಿಗೆ, ಸತಿಸಹಗಮನ ನಿಲ್ಲಿಸುವ ಕಾರ್ಯದಲ್ಲಿ ಯಶಸ್ವಿಯಾದರು. ಬಾಲ್ಯವಿವಾಹಕ್ಕೆ ತಡೆ, ಸ್ತ್ರೀ ವಿದ್ಯಾಭ್ಯಾಸಕ್ಕೆ ಬೆಂಬಲ, ಪಾಶ್ಚಾತ್ಯ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನಿತ್ತು, ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ದುಡಿದರು. 1817ರಲ್ಲಿ ಮೊಗಲಚಕ್ರವರ್ತಿಯಿಂದ 'ರಾಜಾ' ಎಂಬ ಬಿರುದನು

ಪಡೆದು, ಮುಂದೆ ಇಂಗ್ಲೆಂಡಿಗೆ ತೆರಳಿದರು. ಅನಾರೋಗ್ಯದ ದೆಸೆಯಿಂದ 1833ರಲ್ಲಿ ಬ್ರಿಸ್ಟಲಿನ ಸ್ಟಾಪ್ಲೆಟನ್ ಗೋವ್ ಎಂಬಲ್ಲಿ ಶಾಶ್ವತ ವಿಶ್ರಾಂತಿಯನ್ನು ಹೊಂದಿದರು.

2. ಸ್ವಾತಂತ್ರ್ಯ ಸಮರಖ್ಯಾತೆ ಲಕ್ಷ್ಮೀಬಾಯಿ (1835—1857)

ಇಂದಿಗೆ ಸುಮಾರು ನೂರು ವರ್ಷಗಳ ಹಿಂದೆಯೇ ಪರದಾಸ್ಯ ಶೃಂಖಲೆಯಿಂದ ಭಾರತವನ್ನು ಬಿಡಿಸಲು ಹೃತ್ಪೂರ್ವಕವಾಗಿ ದುಡಿದು, ಸ್ವಾತಂತ್ರ್ಯ ಸಮರದ ಅಸ್ತಿವಾರಕ್ಕೆ ತನ್ನ ಕೆನ್ನೆತ್ತರನ್ನರ್ಪಿಸಿ, ಭಾರತಾಂಬೆಗಾಗಿ ತನ್ನ ಸರ್ವಸ್ವವನ್ನೂ ತೊರೆದ ಏಕಮಾತ್ರ ರಾಣಿಯೆಂದರೆ ಲಕ್ಷ್ಮೀಬಾಯಿ. ಕಾಶಿಯಲ್ಲಿ ಮರಾಠ ರಾಜನಾದ ಎರಡನೇ ಪೇಶ್ವೆಯ ಸರದಾರನ ಕುವರಿಯಾಗಿ 19—11—1835ರಲ್ಲಿ ಜನಿಸಿ, ಮನೂಬಾಯಿ ಎಂದು ಕರೆಯಲ್ಪಟ್ಟಳು. ಬೆಳೆಯ ಗುಣ ಮೊಳೆಯಲ್ಲೇ ಕಂಡೀತು ಎಂಬ ನಾಣ್ಣುಡಿಯಂತೆ ಎಳವೆಯಲ್ಲಿಯೇ ಮನೂಬಾಯಿಯು ಕ್ಷತ್ರಿಯರಂತೆ ಶಸ್ತ್ರಾಭ್ಯಾಸ ಮಾಡಿ ಅದರಲ್ಲಿ ನಿಪುಣಳಾದಳು. ಝಾನ್ಸಿಯ ಗಂಗಾಧರ ರಾಯನೊಡನೆ ಲಗ್ನವಾಗಿ, ಝಾನ್ಸಿ ಲಕ್ಷ್ಮೀಬಾಯಿಯೆಂಬ ಹೆಸರನ್ನು ಗಳಿಸಿದಳು. ಪುತ್ರೋತ್ಸವದ ಆನಂದಸಾಗರದಲ್ಲಿ ತೇಲುತ್ತಿದ್ದವಳು ಕೆಲವೇ ಸಮಯದಲ್ಲಿ ಪತಿಸುತರನ್ನೂ ಕಳೆದುಕೊಂಡು ದುಃಖಸಾಗರದಲ್ಲಿ ಮುಳುಗಿ ವೈಧವ್ಯದಿಂದಿರಬೇಕಾಯಿತು. ಗಂಡನ ಆಸೆಯಂತೆ ದಾಮೋದರರಾಯನನ್ನು ದತ್ತಪುತ್ರನನ್ನಾಗಿ ಮಾಡಲು ಬ್ರಿಟಿಷರಿಂದ ತಡೆಬಂದುದರಿಂದ ಅವರ ಕುಟಿಲನೀತಿಯನ್ನು ಖಂಡಿಸಿ ವರ್ಷಾಸನಕ್ಕೆ ತಿಲಾಂಜಲಿಯಿತ್ತು 1857ರಲ್ಲಿ ನಾನಾಸಾಹೇಬ್, ತಾತ್ಯಾಟೋಪಿ ಮೊದಲಾದವರ ಬೆಂಬಲದಿಂದ ಬ್ರಿಟಿಷರೆದುರು ಬಂಡಾಯವನ್ನು ಎಬ್ಬಿಸಿದಳು. ಹಿತಚಿಂತಕನಾದ ಪೀರ್‌ಆಲಿಯ ವಂಚನೆಯಿಂದಾಗಿ ಎದುರಾಳಿಗಳ ಈಟಿಗೆ ತನ್ನ ಹೃದಯವನ್ನರ್ಪಿಸಿ, ಸ್ವಾತಂತ್ರ್ಯ ಸಮರದ ಅಡಿಗಲ್ಲಿಗೆ ರಕ್ತಬಲಿಯನ್ನರ್ಪಿಸಿದಳು. ತನ್ನ ಕಣ್ಣಿನಿಂದ ಪರದಾಸ್ಯಕ್ಕೊಳಗಾದ ಭಾರತಾಂಬೆಯನ್ನು ನೋಡಲು ದುಃಖಿಸಿದ ಲಕ್ಷ್ಮೀಬಾಯಿ 1858ರಲ್ಲಿ ತನ್ನ ದೇಹವನ್ನೇ ತೆತ್ತು ಖ್ಯಾತಿಯನ್ನು ಪಡೆದಳು.

3. ವೃದ್ಧ ಪಿತಾಮಹ ದಾದಾಭಾಯಿ
(1825--1917)

ಭಾರತದ ವೃದ್ಧ ಪಿತಾಮಹರೆನಿಸಿ, ರಾಜಕೀಯದಲ್ಲಿ ದುಡಿದವರೆಂದರೆ 1825ರಲ್ಲಿ ಪಾರ್ಶಿ ಸಮಾಜದಲ್ಲಿ ಹುಟ್ಟಿದ ದಾದಾಭಾಯಿ ನೌರೋಜಿಯವರು. ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ವಿದ್ಯೆಯನ್ನು ಗಳಿಸಿ 6 ವರ್ಷ ಕಾಲ ಪದವೀಧರರಾಗಿ, ಅಧ್ಯಾಪಕರಾಗಿ ವಿದ್ಯಾಪ್ರಚಾರಕ್ಕಾಗಿ ಶಾಲೆಯನ್ನು ಸ್ಥಾಪಿಸಿದರು. 1856ರಲ್ಲಿ ವ್ಯಾಪಾರಕ್ಕಾಗಿ ಇಂಗ್ಲೆಂಡಿಗೆ ಹೋಗಿ ಅಲ್ಲಿ ಈಸ್ಟ್ ಇಂಡಿಯಾ ಸಂಘವನ್ನು ಸ್ಥಾಪಿಸಿ, ಭಾರತೀಯರಿಗಾಗಿ ಸೇವೆಮಾಡಿದರು. 1869ರಲ್ಲಿ ಭಾರತಕ್ಕೆ ಬಂದು ಸಾಮಾಜಿಕ ಕಾರ್ಯಕ್ಷೇತ್ರದಲ್ಲಿ ದುಡಿದು, ಭಾರತೀಯರಿಗಾಗಿ ಹೆಣಗಾಡಿದರು. ತಿರುಗಿ ಇಂಗ್ಲೆಂಡಿಗೆ ಹೋಗಿ 1892ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರಾದರು. ತಿರುಗಿ ಭಾರತಕ್ಕೆ ಬಂದು ಇವರು ರಾಜಕೀಯ ಕ್ಷೇತ್ರದಲ್ಲಿ ಶ್ರಮಿಸಿ, 1886, 1893, 1906ರಲ್ಲಿ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಸ್ವರಾಜ್ಯವೇ ಭಾರತೀಯರ ಗುರಿಯಾಗಬೇಕೆಂದು ಬೋಧಿಸಿದವರಲ್ಲಿ ಇವರು ಮೊದಲಿಗರು. ಸ್ವದೇಶಿ ಚಳವಳವನ್ನು ಪ್ರಾರಂಭಿಸಿ ರಾಷ್ಟ್ರದ ಜನತೆಗೆ ಸ್ವದೇಶಿ ವಸ್ತುಗಳನ್ನು ಕೊಳ್ಳುವುದರಿಂದಾಗುವ ಲಾಭವನ್ನು ಪ್ರಚಾರಪಡಿಸಿದರು. ವಿದೇಶಿ ವಸ್ತುಗಳ ಬಹಿಷ್ಕಾರಕ್ಕೆ ಸ್ಫೂರ್ತಿಯನ್ನಿತ್ತರು.

4. ಹಿಂದೂ ಧರ್ಮೋದ್ಧಾರಕ ಪರಮಹಂಸ
(1834—1886)

ಸನಾತನ ಧರ್ಮದ ತವರ್ಮನೆಯಾದ ಭಾರತದಲ್ಲಿ, ಧರ್ಮಗಳು ಶಿಥಿಲಗೊಳ್ಳುತ್ತಿರುವಾಗ, ಧರ್ಮವನ್ನು ಉದ್ಧರಿಸಲು ಜನಿಸಿ, ನಿರಂತರವೂ ಪಾರಮಾರ್ಥಿಕ ಜ್ಞಾನಪಿಪಾಸೆಯಲ್ಲಿಯೇ ನಶ್ವರಶರೀರವನ್ನು ತ್ಯಜಿಸಿದವರಲ್ಲಿ ರಾಮಕೃಷ್ಣರು ಒಬ್ಬರು. ಇವರನ್ನು ದೇವರ ಅವತಾರವೆಂದು ಜನರು ಕರೆಯುತ್ತಿದ್ದರು. ಪರಮಹಂಸರು 1834ರಲ್ಲಿ ವಂಗದೇಶದ ಕಾಮಾರಪುಕುರ ಎಂಬ ಗ್ರಾಮದಲ್ಲಿ ಖುದೀರಾಮ ಚಟ್ಟೋಪಾಧ್ಯಾಯ ಹಾಗೂ ಚಂದ್ರಮಣೀ ದೇವಿಯರ ಪುತ್ರನಾಗಿ ಆವಿರ್ಭವಿಸಿದರು. ಮೂರನೆಯ ಮಗನಾದ ಇವನಿಗೆ ಗದಾಧರನೆಂಬ ಹೆಸರಿಟ್ಟು, ಉಪನಯನವನ್ನು

ಮಾಡಿದಾಗ, ಕಲಿಕತಾ ನಗರದಲ್ಲಿ ರಾಣಿ ರಾಸಮಣಿಯಿಂದ ನಿರ್ಮಿತವಾದ ದಕ್ಷಿಣೇಶ್ವರ ದೇವಾಲಯದ ಅರ್ಚಕನಾಗಿ ಗದಾಧರನು ಬಂದನು. ನಿರಂತರ ಸಾಧನೆಯಿಂದ ಭೈರವಿ ಬ್ರಾಹ್ಮಣಿಯಿಂದ ಶಕ್ತಿಪಡೆದು, ತೋತಾಪುರಿ ಯೆಂಬ ಅದ್ವೈತ ಸಾಧುವಿನಿಂದ ಸಾಧನೆಗಳನ್ನು ಕಲಿತು, ಶಾರದಾದೇವಿಯ ಕರವನ್ನು ಹಿಡಿದರು. "ಬ್ರಹ್ಮವೇ ಸಮಸ್ತ ಚರಾಚರ. ಅದು ಒಂದೆ, ಶಾಶ್ವತ"ವೆಂಬ ತತ್ವವನ್ನು ಶೋಧಿಸಿ, ಶಿಷ್ಯಕೋಟಿಗೆ ಕಾಮಿನೀಕಾಂಚನ ದಲ್ಲಿ ಪ್ರೇಮವಿರದಂತೆ ಉಪದೇಶವಿತ್ತು, ಸಕಲ ಮತಗಳನ್ನೂ ಒಂದೇ ಎಂದು ನಂಬಿ. ಐವತ್ತನೆಯ ವಯಸ್ಸಿನಲ್ಲಿ ಅಂದರೆ 1886ರಲ್ಲಿ ಈ ಲೋಕ ವನ್ನು ತ್ಯಜಿಸಿದರು.

5. ಅನುಭಾವ ತಿಲಕ ರಾನಡೆ

ಭಾರತೀಯ ತತ್ವಜ್ಞಾನ ಹಾಗೂ ಅಧ್ಯಾತ್ಮಿಕತೆಯು ನಾಶವಾಗದೆ ಅದರ ಅವಶೇಷಗಳೇನಾದರೂ ಇಂದಿಗೂ ಅಚ್ಚಳಿಯದೆ ಉಳಿದಿದ್ದರೆ; ಅಲ್ಲದೆ ರಾಜಕೀಯ ರಂಗದಲ್ಲಿ ಗೋಖಲೆ ಹಾಗೂ ತಿಲಕರೂ ಏನಾದರೂ ಕೀರ್ತಿ ಹೊಂದಿದ್ದರೆ ಅದು ಮಹಾದೇವ ಗೋವಿಂದ ರಾನಡೆಯವರಿಂದ. 1842ರಲ್ಲಿ ಜನಿಸಿದ ಇವರು ಉಚ್ಚಶಿಕ್ಷಣವನ್ನು ಪಡೆದು ವಕೀಲರಾಗಿ ಮುಂಬಯಿಯ ಹೈಕೋರ್ಟಿನ ನ್ಯಾಯಾಧೀಶರಾದರು. ಪರೋಕ್ಷವಾಗಿ ಗೋಪಾಲಕೃಷ್ಣ ಗೋಖಲೆ ಹಾಗೂ ತಿಲಕರಿಗೆ ರಾಜಕೀಯ ಗುರುಗಳಾಗಿ ದುಡಿದು ರಾಷ್ಟ್ರಾಭಿ ವೃದ್ಧಿಗೆ ತುಂಬ ಸಹಾಯಮಾಡಿದರು. ಸ್ತ್ರೀ ವಿದ್ಯಾಭ್ಯಾಸ ಮುಂತಾದ ರಾಜಕೀಯ ಕಾರ್ಯದಲ್ಲಿ ತುಂಬ ದುಡಿದರು. ರಾಜಕೀಯ ರಂಗದಲ್ಲಿ ಈಗ ದುಡಿಯುತ್ತಿರುವವರಿಗೆಲ್ಲ ರಾನಡೇಯವರು ವಂದ್ಯರೇ ಸರಿ.

6. ಸರ್ ಫಿರೋಜ್ ಷಾ ಮೆಹತಾ

(1845—1915)

ಬೊಂಬಾಯಿಯಲ್ಲಿ ಜನಿಸಿ, ವಿಶ್ವವಿದ್ಯಾಲಯದ ಮೊದಲ ಪದವೀ ಧರರಾಗಿ, ಕಾಂಗ್ರೆಸ್ಸಿನಲ್ಲಿ ದುಡಿದ ಮಹಾವಾಗ್ಮಿ ಫಿರೋಜ್ ಷಾ ಮೆಹತಾ. 1845ರಲ್ಲಿ ಬೊಂಬಾಯಿಯ ಅವಿಭಕ್ತ ಪಾರ್ಶಿ ಕುಟುಂಬದಲ್ಲಿ ಜನನಕ್ಕೆ ಬಂದವರು. 1864ರಲ್ಲಿ ತನ್ನ 19ನೇ ವಯಸ್ಸಿನಲ್ಲಿ ವಿಶ್ವವಿದ್ಯಾಲಯದ

ಪ್ರಥಮ ಎಂ. ಎ. ಪದವೀಧರರಾದರು. ಇಂಗ್ಲೆಂಡಿಗೆ ಪ್ರಯಾಣಮಾಡಿ 1868ರಲ್ಲಿ ಬ್ಯಾರಿಸ್ಟರರಾದರು. ದೇಶಕ್ಕೆ ಹಿಂತಿರುಗಿ ವಕಾಲತ್ತು ಪ್ರಾರಂಭಿಸಿದರು. ಮುಂಬಯಿಯ ಕೋರ್ಪೋರೇಶನಿನ ಅಧ್ಯಕ್ಷರಾಗಿ ಅದರ ಸರ್ವತೋಮುಖ ಅಭಿವೃದ್ಧಿಗೆ ಶ್ರಮವಹಿಸಿ ದುಡಿದರು. ಮೂರನೆ ಸಲ ಕೇಂದ್ರ ಶಾಸನಸಭೆಯ ಅಧ್ಯಕ್ಷರಾದರು. 1890ರಲ್ಲಿ ಕಾಂಗ್ರೆಸಿನ ಅಧ್ಯಕ್ಷರಾದರು. 1904ರಲ್ಲಿ ಬ್ರಿಟಿಷ್ ಸರಕಾರದವರಿಂದ 'ಸರ್' ಎಂಬ ಪದವಿಯನ್ನು ಪಡೆದು, ಮಂದಗಾಮಿಗಳಾಗಿ ಅಲ್ಲಿಂದ ಆಮರಣಪರ್ಯಂತ ದುಡಿದು, 1915ರಲ್ಲಿ ಇಹಲೋಕದಿಂದ ದೂರವಾದರು.

7. ಲೋಕಮಾನ್ಯ ಬಾಲಗಂಗಾಧರ ತಿಲಕ
(1856 ಜುಲೈ 23—1920)

"ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು" ಎಂದು ಸಿಂಹನಾದಗೈದು, ಪಾರತಂತ್ರ್ಯದಲ್ಲಿ ಬಂಧಿತರಾಗಿದ್ದ ಭಾರತೀಯರನ್ನು ಎಚ್ಚರಿಸಿ, ದೇಶಾಭಿಮಾನ, ನೇಶಸೇವೆ ಮೊದಲಾದ ಉಚ್ಚ ಗುಣಗಳಿಂದ ತೀವ್ರಗಾಮಿಗಳಾಗಿ ದುಡಿದವರೆಂದರೆ, ಲೋಕಮಾನ್ಯ ತಿಲಕರು. ಇವರು ಮಹಾರಾಷ್ಟ್ರ ಬ್ರಾಹ್ಮಣ ಸಮಾಜದಲ್ಲಿ 1856ನೇ ಜುಲೈ 23ರಲ್ಲಿ ಈ ಜಗತ್ತಿನ ಬೆಳಕನ್ನು ಕಂಡು, ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ ವಿದ್ಯೆಯನ್ನು ಪಡೆದು, ಕಾನೂನುಗಳನ್ನು ಅಭ್ಯಾಸಮಾಡಿ, ಸಂಸ್ಕೃತವನ್ನೂ ಕಲಿತರು. ಮುಂದೆ ಪುಣೆಯ ನ್ಯೂ ಇಂಗ್ಲಿಷ್ ಶಾಲೆಯನ್ನು ಸ್ಥಾಪಿಸಿದರು. ಆರ್ಯಭೂಷಣ ಮುದ್ರಣಾಲಯವನ್ನು ತೆರೆದು "ಕೇಸರಿ" ಎಂಬ ಮರಾಠಿ ಹಾಗೂ "ಮರಾಠ" ಎಂಬ ಇಂಗ್ಲಿಷ್ ಪತ್ರಿಕೆಗಳನ್ನು ಪ್ರಕಟಿಸತೊಡಗಿದರು. ಇವುಗಳಲ್ಲಿ ಲೇಖನಗಳನ್ನು ಬರೆದು ಜನತೆಯನ್ನು ಎಚ್ಚರಿಸಿ ಎರಡುಬಾರಿ ಕಾರಾಗ್ರಹವಾಸವನ್ನನುಭವಿಸಿದರು. 'ಡೆಕ್ಕನ್ ಎಜುಕೇಶನಲ್ ಸೊಸೈಟಿ' ಎಂಬ ವಿದ್ಯಾಸಂಸ್ಥೆಯನ್ನೂ, ಫರ್ಗ್ಯೂಸನ್ ಕಾಲೇಜನ್ನೂ ಸ್ಥಾಪಿಸಿದರು. 'ಗಣೇಶ' ಮತ್ತು 'ಶಿವಾಜಿ' ಹಬ್ಬಗಳನ್ನು ವ್ಯವಸ್ಥೆಗೊಳಿಸಿ ಜನತೆಯಲ್ಲಿ ಧರ್ಮ ಹಾಗೂ ರಾಷ್ಟ್ರಾಭಿಮಾನವನ್ನು ಹೆಚ್ಚಿಸಿದರು. 'ಕೇಸರಿ'ಯಲ್ಲಿ ಬರೆದ ಲೇಖನವೊಂದಕ್ಕಾಗಿ ಬರ್ಮಾಕ್ಕೆ ಗಡಿಪಾರುಮಾಡಲ್ಪಟ್ಟರು. ಬರ್ಮಾದಲ್ಲಿರುವಾಗ "ಗೀತಾರಹಸ್ಯ"ವೆಂಬ ಪುಸ್ತಕವನ್ನು ಬರೆದರು. 1912—14ರಲ್ಲಿ ಅಲ್ಲಿಂದ ಬಿಡು

ಗಡೆಹೊಂದಿ ಹಿಂತಿರುಗಿದರು. 1916ರಲ್ಲಿ ಲಕ್ನೋ ಕಾಂಗ್ರೆಸಿನ ಮಂದ ಪಕ್ಷದವರೊಡನೆ ತೀವ್ರ ಮತಭೇದವುಂಟಾಗಿ ಬೆಸೆಂಟರ 'ಹೋಮ್‌ರೂಲ್ ಲೀಗ'ನಲ್ಲಿ ಸೇರಿದರು. ಹೋಮ್‌ರೂಲ್ ಚಳವಳದ ಮುಂದಾಳುಗಳಾಗಿ ದುಡಿದರು. ಇವರ ವಾಕ್ಸರಣಿ, ಲೇಖನಸಾಮರ್ಥ್ಯದ ಫಲವಾಗಿ 'ಲೋಕ ಮಾನ್ಯ'ವೆಂಬ ಹೆಸರು ಗಳಿಸಿದರು. 1919ರಲ್ಲಿ ಇಂಗ್ಲೆಂಡಿನ ಪ್ರಯಾಣ ಮಾಡಿ 1920ರಲ್ಲಿ ತಿರುಗಿ ಬಂದಾಗ, ಅನಾರೋಗ್ಯ ಹೊಂದಿ ನಮ್ಮನ್ನಗಲಿದರು. ಇವರ ಪ್ರತಿಯೊಂದು ರಕ್ತದಬಿಂದುವೂ "ಸ್ವರಾಜ್ಯ"ದಿಂದ ತುಂಬಿತ್ತು.

8. ಅಪ್ರತಿಮ ವಿಜ್ಞಾನಿ ಜಗದೀಶಚಂದ್ರ ಬೋಸ್
(1850 ನವಂಬರ 30,—1937)

ಮಾನವರಂತೆ ಸಸ್ಯಗಳಿಗೂ ಜೀವವಿದೆಯೆಂದು ಶೋಧಿಸಿ, ನೋಬೆಲ್ ಪಾರಿತೋಷಕವನ್ನು ಪಡೆದು, ಸಸ್ಯವಿಜ್ಞಾನದಲ್ಲಿ ಉದ್ದಾಮ ಪಾಂಡಿತ್ಯ ವನ್ನು ಗಳಿಸಿದ ಭಾರತೀಯ ವಿಜ್ಞಾನಿಗಳೆಂದರೆ ಜಗದೀಶ ಬೋಸರು. ಪೂರ್ವಬಂಗಾಳದ ಡಾಕ್ಕಾ ಜಿಲ್ಲೆಯ ವಿಕ್ರಮಪುರದ ಭಗವಾನ್‌ಚಂದ್ರ ಬೋಸರ ಮಗನಾಗಿ 1858 ನವಂಬರ 50ರಲ್ಲಿ ಜನಿಸಿದರು. ಭಗವಾನರು ಷಹೀದ್ ನಗರದ ಮೆಜಿಸ್ಟ್ರೇಟರಾಗಿದ್ದರು. ಎಳವೆಯಲ್ಲೆ ಶೋಧನೆಯ ಕುತೂಹಲದಿಂದಿದ್ದ ಜಗದೀಶರು ಸೈಂಟ್ ಕ್ಸೇವಿಯರ್ಸ್ ಕಾಲೇಜಿನಲ್ಲಿ ವಿದ್ವಾಂಸ ಫಾದರ್ ಪಾಂಟರ ಕೆಳಗೆ ಭೌತಿಕ ಶಾಸ್ತ್ರಾಧ್ಯಯನವನ್ನು ಮಾಡಿದರು. ಅಲ್ಲಿಂದ ಉಚ್ಚ ಶಿಕ್ಷಣಕ್ಕಾಗಿ ವಿಲಾಯತಿಗೆ ಹೋಗಿ ಕೆಂಬ್ರಿಜ್ ಕ್ರಿಸ್ಟ್‌ಚರ್ಚ್‌ನಲ್ಲಿ ಕಲಿತು, 1884ರಲ್ಲಿ ನೇಚುರಲ್ ಸಾಯನ್ಸ್ ಟ್ರೈಪಾಸ್‌ನಲ್ಲಿ ಬಹುಮಾನಿತರಾಗಿ, 1886ರಲ್ಲಿ ಕಲ್ಕತ್ತ ಪ್ರೆಸಿಡೆನ್ಸಿ ಕಾಲೇಜಿನ ವೈಜ್ಞಾನಿಕ ಪ್ರೊಫೆಸರರಾದರು. 1887ರಲ್ಲಿ ಸತಿಮಣಿ ಅಬಲ ಬೋಸರೊಂದಿಗೆ ಲಗ್ನವಾಗಿ, ಸಸ್ಯಜಾತಿಗೂ ಜೀವವಿದೆಯೆಂದು ಪ್ರಯೋಗಗಳ ಮೂಲಕ ಸಿದ್ಧಾಂತಪಡಿಸಿದರು. ಆಶುವಾರ್ತಾ ಯಂತ್ರದ ಮೂಲವನ್ನೂ ಶೋಧಿಸಿ ರಾಯಲ್ ಸೊಸೈಟಿಯ ಪಾರಿತೋಷಕವನ್ನು ಪಡೆದರು. ವಿದ್ಯುತ್, ಉಷ್ಣ, ವಿಷ ಮೊದಲಾದುವುಗಳಲ್ಲಿ ಪ್ರತಿಕ್ರಿಯೆಯುಂಟೆಂದೂ ಕಂಡು, ಪ್ಯಾರಿಸಿನಲ್ಲಿ ಮನ್ನಣೆಪಡೆದು, ಶರೀರ ಹಾಗೂ ಸಸ್ಯ ವಿಜ್ಞಾನಗಳೊಳಗೆ ವ್ಯತ್ಯಾಸವಿಲ್ಲವೆಂದು ದೃಢಪಡಿಸಿದರು. ರೆಸೊನೆಂಟ್ ರಿಕಾರ್ಡ

ನಿಂದ ಸಸ್ಯದ ನಾಡಿ ಪರಿಶೀಲನೆಮಾಡಿದರು. ಥರ್ಮೋಗ್ರಾಫ್, ಫೋಟೋಮೀಟರ್ ಉಪಕರಣಗಳನ್ನು ಶೋಧಿಸಿ, ಜಗತ್ತಿನ ವಿಜ್ಞಾನಿಗಳೆಂಬ ರತ್ನಗಳ ಮಾಲೆಯಲ್ಲಿ ಒಬ್ಬರಾಗಿ, ಅಜರಾಮರವಾದ ಕೀರ್ತಿಯನ್ನು ಗಳಿಸಿ, 1937ರಲ್ಲಿ ಭಾರತಾಂಬೆಯನ್ನು ಬಿಟ್ಟು ದೂರವಾದರು.

9. ಮಹರ್ಷಿ ಕವೀಂದ್ರ ರವೀಂದ್ರರು

(1861 ಮೇ 6,—1941).

ಸಾಂಸ್ಕೃತಿಕ, ವೈಜ್ಞಾನಿಕ ತಾತ್ವಿಕ ಹಾಗೂ ಸಾಹಿತಿಕ ಜೀವಿಗಳಿಗೆ ಅನುಭವದ ಭಕ್ಷ್ಯವನ್ನುಣಿಸಿಬಲ್ಲ ಮಹರ್ಷಿಯೆಂಬ ಬಿರುದಾಂಕಿತರಾದ ಮಹನೀಯರೆಂದರೆ ರವೀಂದ್ರನಾಥ ಠಾಗೂರರು. ಇವರು ಬಂಗಾಳದ ಠಾಕೂರ ಮನೆತನದ ಪ್ರಖ್ಯಾತರಾದ ಮಹರ್ಷಿ ದೇವೇಂದ್ರನಾಥ ಠಾಕೂರ ಮತ್ತು ಶಾರದಾ ದೇವಿಯರ ಪುಣ್ಯಗರ್ಭದಲ್ಲಿ ಏಳನೇ ಪುತ್ರನಾಗಿ ಹುಟ್ಟಿದರು. ಇವರು ಮನೆಯಲ್ಲಿಯೇ ಶಿಕ್ಷಣವನ್ನು ಪಡೆದು 8ನೇ ವಯಃಸ್ಸಿನಲ್ಲಿ ಕವಿತಾರಚನೆಯ ಕಾರ್ಯದಲ್ಲಿ ತೊಡಗಿದರು. 1877ರಲ್ಲಿ ಅಣ್ಣನೊಂದಿಗೆ ವಿಲಾಯತಿಗೆ ಹೋಗಿ, ಹಿಂತಿರುಗಿ, ಸಾಹಿತ್ಯಸರಸ್ವತಿಗೆ 15ನೇ ವಯಸ್ಸಿನಲ್ಲಿ ಹೃದಯಂಗಮವಾದ ಕಾವ್ಯವನ್ನು ನಿವೇದಿಸಿದರು. 1883ರಲ್ಲಿ ಮೃಣಾಲಿನಿ ದೇವಿಯೊಡನೆ ಅವರಿಗೆ ಲಗ್ನವಾಯಿತು. 1902ರಲ್ಲಿ ಅವರು ಎರಡು ಹೆಂಗೂಸುಗಳನ್ನು ಪಡೆದರು. ಅವು ರವೀಂದ್ರರನ್ನಗಲಲು, ಅವರ ಸ್ಮಾರಕವಾಗಿ 'ಸ್ಮರಣ'ವೆಂಬ ಕವಿತಾಗುಚ್ಛವನ್ನು ಠಾಕೂರರು ಬರೆದರು. ಮಾತು, ಕೃತಿ, ಬರೆಹ ಹಾಗೂ ಕವಿತೆಗಳಲ್ಲಿ ತೋರಿಸಿದ ಚಮತ್ಕೃತಿಗಾಗಿ ಬ್ರಿಟಿಷರಿಂದ ದೊರೆತ 'ಸರ್' ಎಂಬ ಬಿರುದನ್ನು ಧಿಕ್ಕರಿಸಿ, ಸಾಹಿತ್ಯದಿಂದ ಕ್ರಾಂತಿಯ ಕಿಡಿಯನ್ನೆಬ್ಬಿಸಿದರು. ರಾಜಕೀಯದೆಡೆಗೆ ಸೃಷ್ಟಿಯನ್ನು ಹರಿಸಿ ದೇಶಸೇವೆಯನ್ನು ತ್ರಿಕರಣಪೂರ್ವಕವಾಗಿ ಮಾಡಿದರು. ಸ್ವದೇಶಿ ಪ್ರಚಾರಕಾರ್ಯ, ಕಾರ್ಖಾನೆಗಳ ಸ್ಥಾಪನೆಗೆ ಬೆಂಬಲವಿತ್ತು, ಗೆಳೆಯರ 'ಭಾರತೀಯ ಭಂಡಾರ'ವೆಂಬ ಸಂಸ್ಥೆಗಾಗಿ ದುಡಿದರು. 1899ರಲ್ಲಿ ಬಂಗಾಳದಲ್ಲಿ ಪ್ಲೇಗು ಹಬ್ಬಿರುವ ಕಾಲದಲ್ಲಿ ದುಡಿದು, 1905ರಲ್ಲಿ ವಂಗಭಂಗಕಾಲದಲ್ಲಿ ನಿಧಿ ಸಂಗ್ರಹಿಸಿ ಅದನ್ನು ಇದುರಿಸಿ ದುಡಿದರು. 1908ರಲ್ಲಿ ಬಂಗಾಳದ ಪ್ರಾಂತಿಕ ಪರಿಷತ್ತಿನ ಅಧ್ಯಕ್ಷಭಾಷಣದಲ್ಲಿ ಭಾರತೀಯರ ವಿಚಾರವು ದೇಶ

ಪ್ರೇಮದತ್ತ ಹೆರಿವಂತಿ ಮಾಡಿದರು. 'ಜನಗಣಮನ'ವೆಂಬ ಇವರ ಕೃತಿಯು ರಾಷ್ಟ್ರಗೀತೆಯಾಗಿ, ಸರ್ವರ ಮುಖೋದ್ಗತವಾಗಿದೆ. ಮುಂದೆ ಶಾಂತಿನಿಕೇತನವನ್ನು ಸ್ಥಾಪಿಸಿ 'ವಿಶ್ವಭಾರತಿ' ಎಂಬ ವಿಶ್ವವಿದ್ಯಾಲಯುವನ್ನು ನಿರ್ಮಿಸಿದರು. ಸಾಹಿತ್ಯ ಶಿಖರದಲ್ಲಿ ಮೆರೆಯುವ ರವೀಂದ್ರರ ಕೃತಿಯಾದ "ಗೀತಾಂಜಲಿ'ಗೆ ನೋಬೆಲ್ ಪುರಸ್ಕಾರವು ದೊರೆತಿದೆ. ಆಕ್ಸ್‌ಫರ್ಡ್ ವಿದ್ಯಾಲಯವು ಇವರಿಗೆ "ಡಾಕ್ಟರ್ ಆಫ್ ಲಿಟರೇಚರ್" ಎಂಬ ಬಿರುದನ್ನು ಒಪ್ಪಿಸಿತು. ಇಂಥ ಕಲಾಕೋವಿದರು ತನ್ನ ಇಡೀ ಜೀವನವನ್ನೇ ದೇಶ ಸೇವೆಯಲ್ಲಿ ಸವೆಸಿ ಅಮರಕೀರ್ತಿಯನ್ನು ಪಡೆದರು. ಸ್ವತಂತ್ರ ಭಾರತ ಕ್ಕಾಗಿ ನಿರಂತರ ಶ್ರಮಿಸಿದರೂ ಸ್ವತಂತ್ರ ಭಾರತದ ಕನಸಿನ ಗೋಪುರವನ್ನು ಮಾತ್ರ ರಚಿಸಿ 1941ರಲ್ಲಿ ನಮ್ಮನ್ನಗಲಿದರು.

10. ಸ್ವಾತಂತ್ರ್ಯಪ್ರೇಮಿ ಮೋತಿಲಾಲ್ (1841—1931).

ತಾನು ಮೃತ್ಯುಶಯ್ಯೆಯಲ್ಲಿರುವಾಗಲೂ ಪರದಾಸ್ಯದ ಬಗ್ಗೆ ಕಟು ನುಡಿಗಳನ್ನಾಡಿ, ಮೂವತ್ತರಲ್ಲೆ ಭಾರತದ ಸ್ವಾತಂತ್ರ್ಯದ ಕನಸಿನ ಗೋಪುರವನ್ನು ಕಟ್ಟಿದವರೆಂದರೆ ಮೋತೀಲಾಲರು. 1861ನೇ ಮೇ 6ನೇ ದಿನ ಕವೀಂದ್ರ ರವೀಂದ್ರರ ಜನನದ ದಿನವೇ ಮೋತಿಲಾಲರ ಜನ್ಮದಿನ. ಮೋತಿಲಾಲರು ಭಾರತದ ಭಾಗ್ಯಬ್ರಹ್ಮರಾದರು. ನವಭಾರತ ನಿರ್ಮಾಣದ ಶಿಲ್ಪಿಯಾದರು. ಮೋತಿಲಾಲರು ತಾಯಿಯ ಗರ್ಭದಲ್ಲಿರುವಾಗಲೇ ತಂದೆ ಯನ್ನು ಕಳಕೊಂಡರು. ಅಣ್ಣ ನಂದಲಾಲರ ಆರೈಕೆಯಲ್ಲಿ ಬೆಳೆದು, ಕಾನ್ಪುರ ಹೈಸ್ಕೂಲಿನಲ್ಲಿ ವಿದ್ಯೆಯನ್ನು ಕಲಿತು, ಪ್ರಯಾಗದ ಮ್ಯೋರ ಕೊಲೇಜನ್ನು ಸೇರಿ, ನ್ಯಾಯಶಾಸ್ತ್ರದಲ್ಲಿ ಉದ್ದಾಮ ಪಾಂಡಿತ್ಯವನ್ನು ಗಳಿಸಿ, ಹೈಕೋರ್ಟ್ ವಕೀಲಿ ಪರೀಕ್ಷೆಯಲ್ಲಿ ಸರ್ವಪ್ರಥಮರಾಗಿ ಸ್ವರ್ಣಪದಕ ಪಡೆದು, ತನ್ನ 28ನೇ ವಯಸ್ಸಿನಲ್ಲಿ ಅಂದರೆ 1889ರಲ್ಲಿ ವಕೀಲಿವೃತ್ತಿ ಯನ್ನು ಪ್ರಾರಂಭಿಸಿದರು. ಮೋತಿಲಾಲರಿಗೆ ಮೂವರು ಮಕ್ಕಳು. ಜವಾ ಹರ, ವಿಜಯಲಕ್ಷ್ಮಿ ಮತ್ತು ಕೃಷ್ಣಾ. ಅಲ್ಲಹಾಬಾದಿನಲ್ಲಿ ಮೋತಿಲಾಲರು ಕೊಂಗ್ರೆಸ್ಸಿಗಾಗಿ ಆನಂದ ಭವನವನ್ನು ಕಾಣಿಕೆಯಿತ್ತರು. 1888ರಲ್ಲಿ ಅಲ್ಲ ಹಾಬಾದ ಕೊಂಗ್ರೆಸ್ಸಿನ ಅಧ್ಯಕ್ಷರಾದರು. ಬಹಿಷ್ಕಾರ ಹಾಗೂ ಶಾಸನ

ಭಂಗಗಳನ್ನು ಒಪ್ಪದ ಅವರು 'ಲೀಡರ್,' 'ಇಂಡಿಪೆಂಡೆಂಟ್' ಮೊದಲಾದ ಪತ್ರಿಕೆಗಳ ಮೂಲಕ ಸರಕಾರವನ್ನು ಟೀಕಿಸಿದರು. ರೌಲೆಟ್ ಕಾನೂನು, ಪಂಜಾಬಿನ ಹತ್ಯಾಕಾಂಡ, ಅಮೃತಸರದ ಕೊಲೆಗಳು ನಡೆದ ಮೇಲಂತೂ ಮೋತಿಲಾಲರು ಉಗ್ರಗಾಮಿಗಳಾಗಿ ಸ್ವಾತಂತ್ರ್ಯ ಸಂಗ್ರಾಮದ ಸೇನಾನಿಯಾಗಿ ದುಡಿದರು. 1916ರಲ್ಲಿ ಅಮೃತಸರದ ಕೊಂಗ್ರೆಸಿನಲ್ಲಿ ಅಧ್ಯಕ್ಷರಾಗಲು ಅನಾರೋಗ್ಯದ ನಿಮಿತ್ತ ಸಾಧ್ಯವಾಗಲಿಲ್ಲ. 1919ರಲ್ಲಿ ಗಾಂಧೀಜಿಯವರ ಪ್ರಥಮ ಭೇಟಿಯಾದ ದಿನದಿಂದ ವಕೀಲಿವೃತ್ತಿಗೆ ತಿಲಾಂಜಲಿಯಿತ್ತು, ಹಲವಾರು ಬಾರಿ ಸೆರೆಮನೆಯನ್ನು ಸೇರಿ, 1926ರಲ್ಲಿ ಚಿತ್ತರಂಜನ ದಾಸರ ಬೆಂಬಲದಿಂದಾಗಿ ಸ್ವರಾಜ್ಯಪಕ್ಷವೊಂದನ್ನು ನಿರ್ಮಿಸಿ ಕೊಂಗ್ರೆಸಿಗಾಗಿ ತಮ್ಮ ಸರ್ವಸ್ವವನ್ನೂ ತ್ಯಜಿಸಿದರು. 1924ರಲ್ಲಿ ಐಕ್ಯ ಪರಿಷತ್ತಿನ ಅಧ್ಯಕ್ಷರಾಗಿ, ಮುಂದೆ ಮದ್ರಾಸ್ ಕೊಂಗ್ರೆಸಿನಲ್ಲಿ ಸರ್ವ ಪಕ್ಷೀಯರ ಬೆಂಬಲದಿಂದ ಭಾರತದ ಒಂದು ಹೊಸ ಯೋಜನೆಯನ್ನು ಇವರು 'ನೆಹರೂ ವರದಿ' ಎಂಬ ಹೆಸರಿಂದ ಮುಂದೆ ತಂದು ಭಾರತದ ಘಟನೆಗೆ ಬುನಾದಿಯನ್ನಿಕ್ಕಿದರು. 1929ರಲ್ಲಿ ತನ್ನ ಪುತ್ರ ಜವಾಹರರ ಅಧ್ಯಕ್ಷತೆಯಲ್ಲಿ ಜರಗಿದ ಲಾಹೋರ್ ಅಧಿವೇಶನದಲ್ಲಿ ಸ್ವೀಕೃತವಾದ ಸ್ವಾತಂತ್ರ್ಯ ಘೋಷಣೆಯನ್ನು ಕೇಳಿ ಆನಂದಪರವಶರಾದರು. ತಿರುಗಿ ಕಾರಾಗ್ರಹವನ್ನನುಭವಿಸಿ, ಶ್ವಾಸರೋಗದಿಂದ ಹಾಸಿಗೆ ಹಿಡಿದರು. 1931 ಫೆಬ್ರವರಿ 6ರಂದು ಈ ಪಾರ್ಥಿವ ಶರೀರವನ್ನು ತ್ಯಜಿಸಿದರು.

11. ಸನಾತನ ಧರ್ಮ ಪ್ರಚಾರಕ ವಿವೇಕಾನಂದ

(1862 ಜನವರಿ 9,—1902 ಜುಲೈ 2)

ವಿಶ್ವದ ಮಾನವಕೋಟಿಗೆ ಜ್ಞಾನಪ್ರಕಾಶವನ್ನು ಪಸರಿಸಿ, ಸನ್ಮಾರ್ಗದರ್ಶಕವಾದ ದಿವ್ಯಶಕ್ತಿಯು ಸನಾತನ ಆರ್ಯ ಸಂಸ್ಕೃತಿಯಲ್ಲಿದೆಯೆಂದು ಪ್ರಪಂಚಕ್ಕೆ ಖಚಿತವಾಗುವಂತೆ ಘೋಷಿಸಿದ ವೀರವಿಭೂತಿಪುರುಷರು ಸ್ವಾಮಿ ವಿವೇಕಾನಂದರು. 1862ನೇ ಜನವರಿ 9ನೇ ತಾರೀಕು ಪುಷ್ಯ ಸಂಕ್ರಾಂತಿಯ ಹಬ್ಬದ ದಿನ ಪವಿತ್ರ ಮುಹೂರ್ತದಲ್ಲಿ ಬಂಗಾಳದ ಕಾಯಸ್ಥ ಕ್ಷತ್ರಿಯ ಕುಲದ ಕಲ್ಕತ್ತದ ಪ್ರಸಿದ್ಧ ವಕೀಲರಾದ ವಿಶ್ವನಾಥದತ್ತರ ಪತ್ನಿ ಭುವನೇಶ್ವರಿ ದೇವಿಯ ಪವಿತ್ರ ಗರ್ಭದಲ್ಲಿ ಇವರ ಜನನವಾಯಿತು. ಇವರ

ಹುಟ್ಟು ಹೆಸರು ನರೇಂದ್ರನಾಥ. ವಿದ್ಯಾರ್ಥಿಯ ದೆಸೆಯಲ್ಲಿ ತುಂಟನಾಗಿದ್ದ ಇವರು, ಅಪೂರ್ವ ವಾಗ್ಮಿಯಾಗಿದ್ದರು. ಪಾಶ್ಚಾತ್ಯ ಹಾಗೂ ಹಿಂದೂ ಸಂಸ್ಕೃತಿಗಳ ತಿಕ್ಕಾಟವಾಗುತ್ತಿದ್ದ ಆ ಕಾಲದಲ್ಲಿ ತನ್ನ ಸ್ವಂತ ಧೀಶಕ್ತಿಯಿಂದ ಸತ್ಯಾನ್ವೇಷಣೆಯನ್ನು ಮಾಡುತ್ತಿದ್ದನು. ಜ್ಞಾನಪಿಪಾಸೆಯನ್ನು ಜ್ಞಾನಿಗಳಿಂದ ತಣಿಸಿಕೊಂಡು, ವಿಚಾರದ ಒರೆಗಲ್ಲಿನಲ್ಲಿ ಸಮಸ್ಯೆಗಳನ್ನು ಹೆಚ್ಚಿ ಬಿಡಿಸುತ್ತಿದ್ದನು. ಧರ್ಮಗ್ರಂಥಗಳಾದ ವೇದ, ಕುರಾನ್, ಬೈಬಲ್ ಗಳನ್ನೋದಿ,ಪಂಡಿತರು ಮತ್ತು ಸಾಧುಗಳ ಹತ್ತಿರ ತರ್ಕಿಸಿ ಸಾರವನ್ನು ಗಳಿಸಿಕೊಂಡರು. ಆಗ ಉಂಟಾದ ಆಧ್ಯಾತ್ಮಿಕ ಜ್ಞಾನತೃಷೆಯನ್ನು ಇಂಗಿಸಲು ದಕ್ಷಿಣೇಶ್ವರದಲ್ಲಿದ್ದ ಪರಮಹಂಸರಲ್ಲಿಗೆ ಬಂದರು. ವಿವಾಹಬಂಧನವನ್ನು ಕಿತ್ತೊಗೆದು ಪರಮಹಂಸರಿಂದ ಸನ್ಯಾಸದೀಕ್ಷೆಯನ್ನು ಸ್ವೀಕರಿಸಿ, ಭಾರತವನ್ನು ಸುತ್ತಿ, ಹಿಂದೂಧರ್ಮ ಪ್ರಚಾರಕಾರ್ಯವನ್ನು ಮಾಡಿದರು. 1892ರಲ್ಲಿ ಅಮೇರಿಕದ ಚಿಕಾಗೋ ನಗರದಲ್ಲಿ ನಡೆದ ಸರ್ವ ಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಹೋಗಿ, ಅಲ್ಲಿ ಭಾಷಣಾರಂಭದಲ್ಲೇ 'ಬಂಧುಗಳೆ, ಭಗಿನಿಯರೇ' ಎಂದು ಸಂಬೋಧಿಸಿ, ಅಸ್ಖಲಿತ ವಾಕ್ಸರಣಿಯಿಂದ ಸರ್ವ ಧರ್ಮ ಸಮನ್ವಯ ಸಿದ್ಧಾಂತವಾದ ಭಾರತೀಯ ಧರ್ಮತತ್ವವನ್ನು ಸಾರಿ ಭಾರತಾಂಬೆಯ ಮಸ್ತಕದತ್ತ ಪಾಶ್ಚಾತ್ಯದೇಶಗಳೂ ಕಣ್ತೆರೆದು ನೋಡುವಂತೆ ಮಾಡಿದರು. ಆಗಲೇ ತಮ್ಮ ಹೆಸರನ್ನು 'ವಿವೇಕಾನಂದ'ನೆಂದು ಬದಲಿಸಿದ್ದ ಅವರು ಮಾತೃಭೂಮಿಗೆ ಬಂದು ರಾಮ-ಕೃಷ್ಣರ ಸ್ಮಾರಕಕ್ಕಾಗಿ ರಾಮಕೃಷ್ಣ ಮಿಶನ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇವರು 1902ರಲ್ಲಿ ತಮ್ಮ ನಡುಪ್ರಾಯದಲ್ಲಿಯೇ ಭಾರತಾಂಬೆಯನ್ನು ತ್ಯಜಿಸಿದರು.

12. ಸ್ವಾತಂತ್ರ್ಯದಾತ ಬಾಪೂ

1869 ಅಕ್ಟೋಬರ 2, –1948 ಜನವರಿ 30.

'ಸತ್ಯ, ಶಾಂತಿ, ಅಹಿಂಸೆ' ಎಂಬ ತಾರಕಮಂತ್ರವನ್ನು ನಿರಂತರ ಪಠಿಸುತ್ತ, ತ್ರಿಕರಣಪೂರ್ವಕವಾಗಿ ದುಡಿದು, ಸರ್ವ ಧರ್ಮಗಳನ್ನೂ ಪ್ರೋತ್ಸಾಹಿಸಿ, ಜಾತೀಯತೆಯನ್ನು ಕಳೆದು, ಹರಿಜನೋದ್ಧಾರಕ್ಕೆ ಬುನಾದಿಯನ್ನಿತ್ತು, ಭಾರತಕ್ಕೆ ಸ್ವಾತಂತ್ರ್ಯವನ್ನು ತಂದಿತ್ತ ಭಾರತೀಯ ಕಣ್ಮಣಿಗ

ಳೆಂದರೆ ಮಹಾತ್ಮಾ ಗಾಂಧೀಜಿಯವರು. ಪೋರ್‌ಬಂದರ ರಾಜಕೋಟೆ ಗಳ ದಿವಾನರಾಗಿ (ಬನಿಯ ವಂಶಸ್ಥರಾಗಿ) ಸತ್ಯಸಂಧರಾದ ಕರಮಚಂದ ಗಾಂಧಿ ಹಾಗೂ ಸಾಧ್ವೀಮಣಿಯಾದ ಪುತಲೀಬಾಯಿಯವರ ಪುತ್ರರಾಗಿ 1869ನೇ ಅಕ್ಟೋಬರ 2ರಂದು ಗಾಂಧೀಜಿಯವರು ಜನಿಸಿದರು. ಹುಟ್ಟೂ ರಲ್ಲೇ ಮೆಟ್ರಿಕ್ ವಿದ್ಯೆಯನ್ನು ಪಡೆದ ಬಾಪೂ, 13ನೇ ವಯಸ್ಸಿನಲ್ಲೇ ಕಸ್ತೂರಿಬಾರವರನ್ನು ಲಗ್ನವಾದರು. ಮುಂದೆ ವಕಾಲತನ್ನು ಕಲಿತು 1891ನೇ ಜೂನ್ 10ನೇ ತಾರೀಕಿನ ದಿನ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸ್ವದೇಶಕ್ಕೆ ಬಂದರು. ಕೆಲಸಮಯ ಬೊಂಬಾಯಿ ಯಲ್ಲೂ, ರಾಜಕೋಟೆಯಲ್ಲೂ ವಕಾಲತ್ತು ನಡೆಸಿ, ದಕ್ಷಿಣ ಅಫ್ರಿಕಕ್ಕೆ ತೆರಳಿ ವರ್ಣದ್ವೇಷಗಳ ಬಗ್ಗೆ ಬಿಳಿಯರೊಂದಿಗೆ ಕಾದಾಡಿದರು. 1893ರಲ್ಲಿ ನತಾಳದ ಭಾರತೀಯರ ಕೊಂಗ್ರೆಸನ್ನು ಸ್ಥಾಪಿಸಿದರು. ಅಹಿಂಸೆಯ ಮೂಲಕ ಸತ್ಯಾಗ್ರಹಕಾರ್ಯಕ್ಕೆ ಜೆಂಬಲವಿತ್ತು, ತತ್ಪರಿಣಾಮವಾಗಿ ಸೆರೆ ಮನೆಗೆ ಒಯ್ಯಲ್ಪಟ್ಟರು. ಕೊನೆಗೆ ಸರಕಾರವು ತನ್ನ ಅಪಜಯವನ್ನೊ ಪ್ಪಲು, ಗಾಂಧೀಜಿಯವರು ಭಾರತಕ್ಕೆ ಹಿಂತಿರುಗಿದರು. ಆಗ ಇಲ್ಲಿ ಒಂದು ಜಾಗೃತಿಯುಂಟಾಗಿತ್ತು. ಅಲ್ಲಲ್ಲಿ ಆಶ್ರಮಗಳನ್ನು ಸ್ಥಾಪಿಸಿ ಜನತೆಗೆ ವಿದ್ಯಾಭ್ಯಾಸವಿತ್ತು, ರೌಲತ್ ಕಾನೂನನ್ನು ಖಂಡಿಸಲು 1920-21ರಲ್ಲಿ ಸತ್ಯಾಗ್ರಹವನ್ನು ಹೂಡಿದರು. ಇದರಿಂದ ಗಾಂಧಿಜಿಯವರು ಸೆರಮನೆಗೆ ತೆರಳಬೇಕಾಯಿತು. ಮುಂದೆ ಖಾದೀಪ್ರಚಾರ, ಗುಡಿಕೈಗಾರಿ ಕೆಗೆ ಪ್ರೋತ್ಸಾಹವನ್ನು ಕೈಕೊಂಡು, 1930ರಲ್ಲಿ ಉಪ್ಪಿನ ಸತ್ಯಾಗ್ರಹವನ್ನು ನಡೆಸಿ, ಫಲವಾಗಿ ಇರ್ವಿನರೊಂದಿಗೆ ಒಪ್ಪಂದ ಮಾಡಿಕೊಂಡರು. ಗಾಂಧೀ ಜಿಯವರು ತಮ್ಮ ಜನನದ ವಾರವನ್ನು ಖಾದಿವಾರವೆಂದು ಮಾಡಲು ಪ್ರಯತ್ನಿಸಿದರು. ಹರಿಜನರ ಉದ್ಧಾರಕ್ಕಾಗಿ ಹರಿಜನ ಸೇವಕ ಸಂಘ ವನ್ನು ಸ್ಥಾಪಿಸಿದರು. 'ಈಶ್ವರ ಅಲ್ಲಾ ತೇರೇ ನಾಮ್ ಸಬಕೋ ಸನ್ಮತಿ ದೇ ಭಗವಾನ್' ಎಂದು ಮತೈಕ್ಯವನ್ನು ಪ್ರಚಾರಮಾಡಿದರು. 1931ರ ಸುಮಾರಿಗೆ ಕಾಯಿದೆ ಭಂಗ ಚಳವಳವನ್ನಾರಂಭಿಸಿ, 1931—32ರಲ್ಲಿ ದುಂಡುಮೇಜಿನ ಪರಿಷತ್ತಿಗೆ ಭಾರತದ ಪ್ರತಿನಿಧಿಯಾಗಿ ನೇಮಕಗೊಂಡು ಇಂಗ್ಲೆಂಡಿಗೆ ಹೋದರು. ತಿರುಗಿ ಕಾಯಿದೆಭಂಗ ಚಳವಳವನ್ನು ಪ್ರಾರಂಭಿಸಲು 1932ರಲ್ಲಿ Communal Award ಪ್ರಚಾರವಾಯಿತ್ತು.

ಇದರಿಂದ ಪ್ರಯೋಜನ ದೊರೆಯದೆ ಅದೇ ಸಪ್ಟಂಬರ 20ರಂದು ಉಪವಾಸ ಪ್ರಾರಂಭಿಸಿ ಮುಂದೆ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ದೇಶವನ್ನು ಸುತ್ತಾಡಿದರು. 1939ರಲ್ಲಿ ಭಾರತ–ಪಾಕಿಸ್ಥಾನವೆಂದು ವಿಂಗಡಿಸಲು ರಾಜಗೋಪಾಲಾಚಾರಿಯವರಿತ್ತ ಸಂದೇಶವನ್ನು ಬದಿಗೊತ್ತಿ 1942ರಲ್ಲಿ "ಭಾರತದಿಂದ ತೊಲಗಿರಿ" ಚಳವಳವನ್ನು ಹೂಡಿದರು. ಇದು ಅವರ ಕೊನೆಯ ಚಳವಳ. ಇದರ ಪರಿಣಾಮವಾಗಿ 1947ನೇ ಅಗೋಸ್ತು 15ರಂದು ಭಾರತವು ಸ್ವತಂತ್ರವಾಯಿತು ಆದರವರು ಸ್ವತಂತ್ರ ಭಾರತದ ಫಲವನ್ನುಣ್ಣದೆ 1948ನೇ ಜನವರಿ 30 ಶುಕ್ರವಾರ ಹಿಂದೂ ದುರಾತ್ಮನೊಬ್ಬನಿಂದ ಹತರಾದರು. ಇಂಥ ಕಣ್ಮಣಿಗಳನ್ನು ಪಡೆದ ಭಾರತಾಂಬೆಯೇ ಧನ್ಯಳು.

Edited, Printed & Published by K. V. Shenoy
at the Prabhat Printers, Ltd., Mangalore.